ಬೃಹನ್ನಗರಗಳು ತಮ್ಮಲ್ಲಿಗೆ ಬರುವ ಯಾರನ್ನೂ ಬೇಡವೆನ್ನುವುದಿಲ್ಲ. ಎಲ್ಲರಿಗೂ ಎಲ್ಲೋ ಒಂದಷ್ಟು ಜಾಗ, ಒಂದಿಲ್ಲೊಂದು ದುಡಿಮೆಯ ಮಾರ್ಗ ಇದ್ದೇ ಇರುತ್ತದೆಯಲ್ಲ. ಪೊನ್ನುಸಾಮಿಯೂ ಒಂದು ಸೆಕ್ಯುರಿಟಿ ಏಜನ್ಸಿಯಲ್ಲಿ ಕೆಲಸಕ್ಕೆ ಸೇರಿ ಎಟಿಎಂ ಒಂದರಲ್ಲಿ ರಾತ್ರಿ ಡ್ಯೂಟಿ ಮಾಡುತ್ತಿದ್ದ. ಹಗಲು ಹೊತ್ತು ಅವರಿವರ ಮನೆಗಳಲ್ಲಿ ಕಿತ್ತುಹೋದ ನೆಲಕ್ಕೆ ಗಾರೆ ಹಾಕುವುದೋ, ಚರಂಡಿ ಕಟ್ಟಿಕೊಂಡಿದ್ದರೆ ಕ್ಲೀನ್ ಮಾಡಿಕೊಡುವುದೋ, ಮದುವೆ ಮುಂಜಿಗಳಿದ್ದಲ್ಲಿ ಚಪ್ಪರ ಹಾಕುವುದೋ ಮುಂತಾದ ಚಿಲ್ಲರೆ ಕೆಲಸಗಳನ್ನು ಮಾಡಿ ಮತ್ತೊಂದಿಷ್ಟು ಸಂಪಾದಿಸುತ್ತಿದ್ದ. ಚಿನ್ನಮ್ಮ ಸ್ವಲ್ಪ ದೂರದಲ್ಲಿದ್ದ ಅಪಾರ್ಟ್‌ಮೆಂಟಿನ ನಾಲ್ಕಾರು ಮನೆಗಳಲ್ಲಿ ಮನೆಗೆಲಸಕ್ಕೆ ಹೋಗುತ್ತಿದ್ದಳು. ಇಬ್ಬರು ಮಕ್ಕಳನ್ನು ಹತ್ತಿರದ ಸರ್ಕಾರಿ ಶಾಲೆಗೆ ಕಳಿಸುತ್ತಲೂ ಇದ್ದರು. ಇವರಂತೆಯೇ ಉಳಿದವರೂ, ವಾಸಕ್ಕೆ ಸರಿಯಾದ ನೆಲೆ ಇಲ್ಲ ಎನ್ನುವುದನ್ನು ಬಿಟ್ಟರೆ, ಹೊಟ್ಟೆಬಟ್ಟೆಗೆ ತೀರಾ ತತ್ವಾರವಿಲ್ಲದ, ಇದ್ದುದರಲ್ಲಿ ನೆಮ್ಮದಿಯ ಜೀವನ ನಡೆಸುತ್ತಿದ್ದರು.

ಪೊನ್ನುಸಾಮಿ ಹೊರಗೆ ಬಂದು ನಿಂತ. ಮುರುಗೇಶನ ಮನೆಯ ಕಡೆ ಹೋಗುವ ಮೊದಲು, ಅವನಿಗೆ ಆ ಹುಡುಗನ ಸಾವಿನ ಕಾರಣ ತಿಳಿದುಕೊಳ್ಳಬೇಕೆನಿಸಿತು. ಯಾರನ್ನು ಕೇಳಿದರೆ ಸರಿ ಎಂದು ಯೋಚಿಸುತ್ತಿದ್ದಾಗ ರೈಲು ಕಂಬಿಯನ್ನು ದಾಟಿ ತನ್ನೆಡೆಗೆ ಬರುತ್ತಿದ್ದ ಎದುರು ಲೈನಿನ ತಂಬಿ ಕಣ್ಣಿಗೆ ಬಿದ್ದ. ಬಹುಶಃ ಅವನಿಗೂ ಸುದ್ದಿ ಮುಟ್ಟಿರಬೇಕು, ಮುರುಗೇಶನ ಮನೆಯತ್ತ ಹೊರಟವನು ಪೊನ್ನುಸಾಮಿಯನ್ನು ಕಂಡು ಇವನತ್ತ ಬಂದ.

"ಅಣ್ಣೋ, ನಿಮ್ ಲೈನ್ನಾಗಿರಾ ಮುರುಗೇಶ ರೈಲಿಗೆ ಸಿಕ್ಕಂತಂತಲ್ಲಾ, ಏನ್ಕತೆ ಅದು? ಯಾಕಂತೆ?" ಎಂದು ಇವನನ್ನೇ ಕೇಳಿದ.

"ನಾನೇ ನಿನ್ನನ್ನು ಕೇಳಣ ಅಂತಿದ್ನಪ್ಪ. ಡ್ಯೂಟಿ ಮುಗ್ಸಿ ಬಂದ್ ತಕ್ಷಣ ವಿಸ್ಯ ತಿಳೀತು. ಬೆಳಿಗ್ ಬೆಳಗ್ಗೇನೇ ಇಂಥಾ ನ್ಯೂಸು. ನಡಿ ಅಲ್ಲಿಗೆ ಹೋಗಾನ. ಏನಾರ ಗೊತ್ತಾದೀತು" ಎನ್ನುತ್ತಾ ಪೊನ್ನುಸಾಮಿ ಮುರುಗೇಶನ ಮನೆಯತ್ತ ಹೆಜ್ಜೆ ಹಾಕಿದ. ತಂಬಿಯೂ ಅವನನ್ನು ಅನುಸರಿಸಿದ.

ಮುರುಗೇಶನ ಮನೆಯ ಬಳಿ ಹತ್ತಿಪ್ಪತ್ತು ಹೆಂಗಸರು, ನಾಲ್ಕಾರು ವಯಸ್ಸಾದ ಗಂಡಸರೂ ಇದ್ದರು. ಅದನ್ನು ಮನೆ ಎಂದು ಅವರು ಕರೆದುಕೊಳ್ಳುತ್ತಿದ್ದರಷ್ಟೇ. ನಾಲ್ಕು ಕಂಬಗಳನ್ನು ನೆಟ್ಟು ಅದರ ಮೇಲೆ ತಗಡಿನ, ಫೈಬರ್‌ನ ಶೀಟುಗಳು, ಅರ್ಧಂಬರ್ಧ ಹರಿದ ಬ್ಯಾನರ್‌ಗಳು, ಹೀಗೆ ಏನು ಸಿಕ್ಕಿತ್ತೋ ಅದೆಲ್ಲವನ್ನೂ ಹೊದಿಸಿದ್ದರು. ಆವರಣದ ಗೋಡೆಯೂ ಅಂಥದ್ದೇ ಸಾಮಾನುಗಳನ್ನು ಬಳಸಿ ಮಾಡಿದ್ದು. ನೀರು ಒಳಗೆ ನುಗ್ಗದ ಹಾಗೆ ಮನೆಯ ಸುತ್ತಾ ಒಂದು ಅಡಿ ಎತ್ತರಕ್ಕೆ ಮಣ್ಣಿನ ದಿಬ್ಬ. ತಡಿಕೆಯ ಬಾಗಿಲೊಂದು ಹೋಗಿ ಬಂದು ಮಾಡುವುದಕ್ಕೆ. ಇವರದ್ದು ಎಂದಲ್ಲ, ಅಲ್ಲಿದ್ದ ಎಲ್ಲಾ ಮನೆಗಳೂ ಹೀಗೆಯೇ ಇದ್ದುದು.

ಕಾಲೋನಿಯ ಹಿರಿಯನಾದ ಆರೋಕ್ಯಪ್ಪನನ್ನು ತಂಬಿಯೇ ಕೇಳಿದ: "ಅಜ್ಜಾ, ಇದ್ ಹೆಂಗಾತು? ಗಂಡಸ್ರ್ಯಾರೂ ಕಾಣ್ತಿಲ್ಲಾ, ಎಲ್ಲಾ ಎಲ್ಲೋಗವ್ರೆ?"

"ಪೊಲೀಸ್ನೋರು ಬಂದು ಇಚಾರ್ಣೆ ಮಾಡೋದ್ರು. ಕುಯ್ಯೋಕೇಂತ ಹೆಣಾ ತಗೊಂಡೋಗವ್ರೆ, ಗೋರ್ಮೆಂಟ್ ಆಸ್ಪತ್ರೆಗೆ. ಎಲ್ಲಾ ಅಲ್ಲೊಗವ್ರೆ. ಹೆಂಗ್ ಸತ್ತಾ ಅನ್ನಾದು, ಯಾರಿಗೂ ಸರಿಯಾಗ್ ಗೊತ್ತಾಗ್ದಪ್ಪಾ. ಬೆಳಗ್ಗೆ ಕತ್ಲಾಗೇ ಎದ್ದು ಎರಡಕ್ ಹೋಗಯ್ತೆ. ರೈಲು ಬಂದಿದ್ದು ಗೊತ್ತಾತೋ ಇಲ್ವೋ, ಅಥ್ವಾ ಬೇಗ್ ದಾಟಿಬಿಡ್ತೀನಿ ಅಂತಂದ್ಕಂಡ್ನೋ, ರೈಲಿಗೆ ಸಿಕ್ಹಾಕ್ಕಂಡು, ಪಾಪ ಓಯ್ತು. ನಾನ್ ಯಾವಾಗ್ಲೂ ಏಳ್ತಾನೇ ಇರ್ತಿದ್ದೆ, ನೋಡ್ಕಂಡ್ ಓಡಾಡ್ರೋ ಅಂತ. ಏನೋ ಗ್ರಾಚಾರ. ಹೆಣಾ ತಂದ್‌ಮ್ಯಾಲೆ ಮಣ್ಣು ಮಾಡೋದಷ್ಟೇ ನಮ್ ಕೆಲ್ಸ. ಅವುನ್ ಅಪ್ಪ ಅಮ್ಮುನ್ ಕಥೆ ಹೇಳು. ಎಷ್ಟ್ ಸಂಕಟ ಆಗಿರ್ಬೇಕ್ ಅವ್ರಿಗೆ" ಎನ್ನುತ್ತಾ ಕಣ್ಣೊರಸಿಕೊಂಡ ಆರೋಕ್ಯಪ್ಪ ಮಾತು ನಿಲ್ಲಿಸಿದ.